

**ಚೆಲುವೆಯರನ್ನು ಮುಂದಿಟ್ಟುಕೊಂಡು ನಡೆಸುವ ಹನಿ ಟ್ರ್ಯಾಪಿಂಗ್ ಇತ್ತೀಚೆಗೆ ವ್ಯಾಪಕವಾಗಿದೆ. ಇಲ್ಲಿ ಮಹಿಳೆಯರು ಮಾತ್ರವಲ್ಲ, ಪುರುಷರನ್ನೂ ಬಳಸಲಾಗುತ್ತದೆ. ಹಾಗೆಯೇ ಇಲ್ಲಿ ಸೇನೆಯೇ ಆಗಬೇಕೆಂದೇನೂ ಅಲ್ಲ, ಕಾರ್ಪೊರೇಟ್ ಕಚೇರಿಯಲ್ಲೂ ಹನಿ ಟ್ರ್ಯಾಪಿಂಗ್ ನಡೆಯುತ್ತದೆ.**



ಪ್ರಚಲಿತಕ್ಕೆ ಬಂದಿದೆ. ಕಾದಂಬರಿಯಲ್ಲಿ ಬರುವ ಪಾತ್ರವೊಂದು, ತಾನು ಬಾಲಕನಾಗಿದ್ದಾಗ 'ಹನಿ ಟ್ರ್ಯಾಪ್' ಎಂಬ ಮೋಹಪಾಶಕ್ಕೆ ಬಿದ್ದಿದ್ದೆ' ಎಂದು ತಪ್ಪೊಪ್ಪಿಕೊಳ್ಳುತ್ತಾನೆ. ಆ ಪದವೇ ಈಗ ಬಳಕೆಗೆ ಬಂದಿದೆ, ಜನಪ್ರಿಯಗೊಂಡಿದೆ, ಆಕ್ಸ್‌ಫರ್ಡ್ ಭಾಷಾ ನಿಘಂಟಿನಲ್ಲೂ ದಾಖಲಾಗಿದೆ.

20ನೇ ಶತಮಾನದ ಆರಂಭದಲ್ಲಿ ನಡೆದ ವಿಶ್ವಯುದ್ಧಗಳಲ್ಲೂ 'ಹನಿ ಟ್ರ್ಯಾಪ್' ವ್ಯಾಪಕ ಬಳಕೆಯಾಗಿರುವ ಕುರಿತು ದಾಖಲೆಗಳಿವೆ. ಸೇನೆ ಮತ್ತು ಬೇಹುಗಾರಿಕೆ ವಲಯದಲ್ಲಿ ಕೇಳಿಬರುವ ಈ ಹೆಸರು ಜನಸಾಮಾನ್ಯರಿಗೆ ಅಷ್ಟೇನೂ ಪರಿಚಿತವಾದುದಲ್ಲ. ಚೆಲುವೆಯರನ್ನು ಮುಂದಿಟ್ಟುಕೊಂಡು ನಡೆಸುವ ಹನಿ ಟ್ರ್ಯಾಪಿಂಗ್ ಇತ್ತೀಚೆಗೆ ವ್ಯಾಪಕವಾಗಿದೆ. ಇಲ್ಲಿ ಮಹಿಳೆಯರು ಮಾತ್ರವಲ್ಲ, ಪುರುಷರನ್ನೂ ಬಳಸಲಾಗುತ್ತದೆ. ಹಾಗೆಯೇ ಇಲ್ಲಿ ಸೇನೆಯೇ ಆಗಬೇಕೆಂದೇನೂ ಇಲ್ಲ, ಕಾರ್ಪೊರೇಟ್ ಕಚೇರಿಯಲ್ಲೂ ಹನಿ ಟ್ರ್ಯಾಪಿಂಗ್ ನಡೆಯುತ್ತದೆ.

ಇಲ್ಲಿ ಬಳಕೆಯಾಗುವವರು ಸಿನಿಮಾ ಹಾಗೂ ಕಿರುತೆರೆ ನಟಿಯರು, ರೂಪದರ್ಶಿಯರು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಗೆ ತೆರಳುವ ವಿದ್ಯಾರ್ಥಿಗಳು, ಗಗನಸಖಿಯರು. ಒಟ್ಟಿನಲ್ಲಿ ಆಕರ್ಷಕ ತರುಣಿಯರನ್ನು ಛೂ ಬಿಟ್ಟು ಮಾಹಿತಿ ಕಲೆಹಾಕಲಾಗುತ್ತದೆ. ಅಧಿಕಾರ ಸ್ಥಾನದಲ್ಲಿ ಮಹಿಳೆಯರಿದ್ದರೆ ಸ್ಫುರದ್ರೂಪಿ ತರುಣರನ್ನು ಮುಂದಿಟ್ಟು ಜಾಲ ಬೀಸಲಾಗುತ್ತದೆ. ಮನೆಗೆಲಸದ ಆಳು, ಕಚೇರಿಯ ಸಹಾಯಕರು, ಸಲಿಂಗಿಗಳೂ ಈ ಕಾರ್ಯಕ್ಕೆ ಬಳಕೆಯಾಗುವುದುಂಟು.

ಮಾಧ್ಯಮಗಳಲ್ಲೂ 'ಹನಿ ಟ್ರ್ಯಾಪ್' ನಡೆದ ಉದಾಹರಣೆಗಳಿವೆ. ಕುಟುಕು ಕಾರ್ಯಾಚರಣೆ ನೆಪದಲ್ಲಿ ಜಾಗತಿಕ ಮಟ್ಟದ ಕೆಲವು ಚಾನಲ್‌ಗಳು ಇಂಥ ಹುಚ್ಚು ಪ್ರಯತ್ನಗಳನ್ನು ನಡೆಸಿವೆ.

## ದೌರ್ಬಲ್ಯವೇ ವಂಚನೆಗೆ ಮೂಲ

ಪುರುಷರ 'ದೌರ್ಬಲ್ಯ'ಗಳೇ ಬೇಹುಗಾರಿಕೆಗೆ ಇರುವ ಸುಲಭದ ಮಾರ್ಗ. ಹೀಗಾಗಿ ಹಣ, ಹೆಂಡ ಹಾಗೂ ಹೆಣ್ಣುಗಳೆಂಬ ಅಸ್ತ್ರ ಪ್ರಯೋಗಿಸಿ ತಮ್ಮ ಜಾಲಕ್ಕೆ ಬೀಳಿಸಿಕೊಳ್ಳಲಾಗುತ್ತದೆ. ಇಂಥ ಕೆಲಸಗಳಲ್ಲಿ ಮಹಿಳೆಯರ ಶ್ರದ್ಧೆ ಹಾಗೂ ರಹಸ್ಯವನ್ನು ಪುರುಷರಿಂದ ನಯವಾಗಿ ಬಾಯಿಬಿಡಿಸುವದರಲ್ಲಿ ಸಮರ್ಥರು ಎಂಬ ಸಾಮಾನ್ಯ ನಂಬಿಕೆಯಿಂದ ಈಗಲೂ ಹೆಚ್ಚುಪಾಲು ಮಹಿಳೆಯರನ್ನೇ ಇದಕ್ಕೆ ಬಳಸಲಾಗುತ್ತದೆ.

ಅನೇಕ ದೇಶಗಳು ತಮ್ಮ ಬೇಹುಗಾರಿಕಾ ಜಾಲದಲ್ಲಿ 'ಹನಿ ಟ್ರ್ಯಾಪಿಂಗ್' ಕಾರ್ಯಾಚರಣೆಗೆ ಅಗತ್ಯವಾದ ತಂಡಗಳನ್ನು ಹೊಂದಿರುತ್ತವೆ. ಚೀನಾ, ರಷ್ಯಾ, ಇಸ್ರೇಲ್, ವಿಯೆಟ್ನಾಂ, ಕ್ಯೂಬಾದಂತ ರಾಷ್ಟ್ರಗಳು ಇಂಥ ಬೇಹುಗಾರಿಕೆಯಲ್ಲಿ ನೈಪುಣ್ಯತೆ ಗಳಿಸಿವೆ. ರಷ್ಯಾದ ಕೆಜಿಬಿ, ಅಮೆರಿಕದ ಸಿಐಎ, ಭಾರತದ ರಾ ಮತ್ತು ಪಾಕಿಸ್ತಾನದ ಐಎಸ್‌ಐ ಸೇರಿದಂತೆ ಹಲವು ರಾಷ್ಟ್ರಗಳು ತಮ್ಮದೇ ಆದ ಬೇಹುಗಾರಿಕಾ ಸಂಸ್ಥೆಗಳನ್ನು ಹೊಂದಿವೆ.

## ಬೇಟವೂ ಬೇಟೆಯೂ...

ಪ್ಯಾರಿಸ್‌ನ ವೇದಿಕೆಯಲ್ಲಿ ಸಂಚಲನ ಮೂಡಿಸಿದ ಡಚ್ ಮಾದಕ ನೃತ್ಯಗಾರ್ತಿ ಮಾರ್ಗರೇಟಾ ಮೊದಲ ವಿಶ್ವ ಯುದ್ಧ ಸಂದರ್ಭದಲ್ಲಿ ಸ್ಪೇನ್ ಮತ್ತು ಇಂಗ್ಲೆಂಡ್ ನಡುವೆ ಆರಾಮವಾಗಿ ಓಡಾಡಿಕೊಂಡಿದ್ದಳು. ನಂತರ ಆಕೆಯನ್ನು ಫ್ರೆಂಚ್ ಸೇನೆ ವಶಕ್ಕೆ ಪಡೆಯಿತು. ಆಕೆ ಜರ್ಮನಿಗಾಗಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪ ಹೊತ್ತಿದ್ದಳು. ರಾಜಕಾರಣಿಗಳು ಮತ್ತು ಅಧಿಕಾರಿಗಳೊಂದಿಗೆ ಸಲಿಗೆ ಬೆಳೆಸಿಕೊಂಡಿದ್ದ ಆಕೆ, ರಹಸ್ಯ ಮಾಹಿತಿಯನ್ನು ಸಂಗ್ರಹಿಸಿ ಜರ್ಮನಿಗೆ ನೀಡುತ್ತಿದ್ದಳು. ಇದಕ್ಕಾಗಿ ಆಕೆಗೆ ಸ್ಪೇನ್‌ನಲ್ಲಿ ಹಣ ಸಂದಾಯವಾಗುತ್ತಿತ್ತು. 1917ರಲ್ಲಿ ಆಕೆಯನ್ನು ಗುಂಡಿಟ್ಟು ಸಾಯಿಸಲಾಯಿತು.

ಸಂಶೋಧನೆ ಮತ್ತು ವಿಶ್ಲೇಷಣೆ ವಿಭಾಗದ (ರಾ) ಬೇಹುಗಾರಿಕೆ ಅಧಿಕಾರಿ ಕೆ.ವಿ. ಉನ್ನಿಕೃಷ್ಣನ್ ಗಗನಸಖಿ ವೇಷದಲ್ಲಿದ್ದ ಅಮೆರಿಕದ ಬೇಹುಗಾರಿಕೆ ಸಂಸ್ಥೆಯ ಅಧಿಕಾರಿಯ ಮೋಹಪಾಶಕ್ಕೆ ಸಿಲುಕಿದ್ದರು. ಎಲ್‌ಟಿಟಿಇ ಕುರಿತು ಮಾಹಿತಿ ಕಲೆಹಾಕಲು ಚೆನ್ನೈನಲ್ಲಿ ಕೆಲಸ ಮಾಡುತ್ತಿದ್ದ ಉನ್ನಿಕೃಷ್ಣನ್ ಅವರು ಮಹತ್ವದ ಮಾಹಿತಿಯನ್ನು ಹಂಚಿಕೊಂಡಿದ್ದಾರೆ ಎಂಬ ಆರೋಪದ ಮೇರೆಗೆ 1987ರಲ್ಲಿ ಅವರನ್ನು ಬಂಧಿಸಲಾಗಿತ್ತು.

1990ರಲ್ಲಿ ಕರಾಚಿಯ ನರ್ಸ್ ಒಬ್ಬರ ಮೋಹಪಾಶಕ್ಕೆ ಸಿಲುಕಿದ ಭಾರತದ ಅಧಿಕಾರಿಯೊಬ್ಬರು, ಐಎಸ್‌ಐಗೆ ಮಹತ್ವದ ಮಾಹಿತಿ ನೀಡಿದ ಆರೋಪ ಎದುರಿಸಿದ್ದರು. ಭಾರತಕ್ಕೆ ಮಾಹಿತಿ ಕಲೆಹಾಕುವ ಸಲುವಾಗಿ ಆ ಮಹಿಳೆಯನ್ನು ನೇಮಿಸಿಕೊಂಡಿರುವೆ ಎಂದವರು

